Indian Journal of History and Archaeology

ISSN (E):2582-225X
VOL-2, ISSUE -5,JANUARY-FEBRUARY, 2021, 52-56

# ನವಶೋಧಿತ ಗುಡಿಹಳ್ಳಿಯ ವಿಜಯನಗರ ಕಾಲದ ಮೈಲಾರಲಿಂಗೇಶ್ವರ ದೇವಾಲಯ –ಒಂದು ಅವಲೋಕನ

**ಜಗದೀಶ ಡಿ.**

**ಜಗದೀಶ,ಡಿ.**
ಪಿಎಚ್.ಡಿ. ಸಂಶೋಧನಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡವಿಶ್ವವಿದ್ಯಾಲಯ, ಹಂಪಿ

ಕಲೆ, ಮನುಷ್ಯ ಸಹಜವಾದ ಒಂದು ಪ್ರವೃತ್ತಿ. ಸಂತೋಷ, ಆನಂದಗಳನ್ನು ಉಂಟು ಮಾಡುವಂಥದ್ದು ಮತ್ತು ಮನುಷ್ಯನಲ್ಲಿ ಅಂತರ್ಗತವಾಗಿರುವ ಪ್ರತಿಭೆಯಿಂದ ವಿಕಾಸಗೊಳ್ಳುವುದು. ಭಾರತೀಯರ ಪ್ರಕಾರ 'ವೇದಗಳೇ ಸರ್ವಕಲೆಗಳಿಗೂ ಮೂಲ". ವಾಸ್ತುಶಿಲ್ಪ, ಸಂಗೀತ, ಚಿತ್ರಕಲೆ, ಸಾಹಿತ್ಯ ಮುಂತಾದವುಗಳೆಲ್ಲವೂ ಲಲಿತಕಲೆಗಳೆಂದು ಹೆಸರು ಪಡೆದಿವೆ. ಭಾರತದ ವಾಸ್ತುಶಿಲ್ಪ, ಚಿತ್ರಕಲೆಗಳ ಬೆಳವಣಿಗೆಗೆ ಕರ್ನಾಟಕವು ಸಹ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡುವುದರ ಮೂಲಕ, ಭಾರತೀಯ ಕಲೆ ಮತ್ತು ವಾಸ್ತುಶಿಲ್ಪವು ಮತ್ತಷ್ಟು ಸಂಪದ್ಯುಕ್ತವನ್ನಾಗಿಸಿದೆ. ಕರ್ನಾಟಕದಾದ್ಯಂತ ಕಂಡುಬರುವ ದೇವಾಲಯಗಳು, ಜೈನಬಸದಿಗಳು ಮಸೀದಿ ಇವೆಲ್ಲವೂ ವಾಸ್ತುಶಿಲ್ಪಕಲೆಯ ಸೌಂದರ್ಯದ ಆಗರಗಳಾಗಿವೆ, ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಗೆ ಪ್ರತೀಕಗಳಾಗಿವೆ.

ಧಾರ್ಮಿಕ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ದೇವಾಲಯ, ಚೈತ್ಯಾಲಯ, ವಿಹಾರಗಳು, ಬಸದಿ, ಮಸೀದಿಗಳನ್ನು ವೈವಿಧ್ಯಮಯ ರೀತಿಯಲ್ಲಿ ಕಟ್ಟಲಾಗಿದೆ. ದೇವಾಲಯಗಳ ನಿರ್ಮಾಣ ಸ್ಥಳೀಯ ಪರಿಸರ, ಲಭ್ಯವಿರುವ ಕಟ್ಟಡ ಸಾಮಗ್ರಿಗಳು, ಕಾಲಕಾಲಕ್ಕೆ ಬಲವಾಗಿ ಬೆಳೆದ ವಿವಿಧ ಮತಗಳು, ಜನರ ಸೌಂದರ್ಯಾಭಿರುಚಿ, ದೊರೆಗಳು ಮತ್ತು ಇತರರು ನೀಡಿದ ಉತ್ತೇಜನ, ಸಮಾಜದ ಸಂಪತ್ತು ಇವುಗಳನ್ನು ಅವಲಂಬಿಸಿದ್ದವು. ಯಾವುದೇ ಮತದ ದೇವಾಲಯವಿರಲಿ, ಆಯಾ ಕಾಲ, ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ವಾಸ್ತುಶಿಲ್ಪ

ಶೈಲಿಯಲ್ಲಿ ನಿರ್ಮಾಣವಾಗಿರುವುದು ಕಂಡಬರುವುದು. ತಮ್ಮ ಇಷ್ಟದೇವರು, ದೇವತೆಗಳ ಹೆಸರಿನಲ್ಲಿ ಕಟ್ಟಲಾದ ದೇವಾಲಯಗಳು ಪ್ರಾಚೀನ ಜನತೆಯ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಈ ದೇವಾಲಯಗಳು ಸ್ಥಳೀಯ ಜನರ, ಸಾರ್ವಜನಿಕ ಮತ್ತು ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗಿದ್ದವು. ಜನರು ದೇವಾಲಯಗಳಲ್ಲಿ ಅಧ್ಯಾತ್ಮಿಕ, ಭೌತಿಕ ನೆಮ್ಮದಿ ಕಂಡುಕೊಂಡರು. ದೇವಾಲಯಗಳಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಲು, ವಿಚಾರ ವಿನಿಮಯಕ್ಕಾಗಿ ಸಭೆ ಸೇರುತ್ತಿದ್ದರು. ಹೀಗೆ ವೈವಿಧ್ಯಮಯ ಚಟುವಟಿಕೆಗಳ ಕೇಂದ್ರವಾಗಿದ್ದ ದೇವಾಲಯಗಳು ಪ್ರಾಚೀನ ಜನಸಮುದಾಯದ ಸಾಂಸ್ಕೃತಿಕ, ಧಾರ್ಮಿಕ ಸಾಧನೆಗಳ ಸಂಕೇತವಾಗಿಯೂ ನೆಲೆಗೊಂಡವು.

ಕರ್ನಾಟಕದಾದ್ಯಂತ ಕಟ್ಟಲಾಗಿರುವ ದೇವಾಲಯಗಳು, ಜನತೆಯ, ರಾಜ–ರಾಣಿಯರ, ಧಾರ್ಮಿಕ ಶ್ರದ್ಧೆ, ಆಸಕ್ತಿ ಪ್ರೋತ್ಸಾಹದ ಮೇಲಾಗಿ ನೂರಾರು ಪ್ರತಿಭಾವಂತ ಮತ್ತು ನುರಿತ ಶಿಲ್ಪಿಗಳ ಶ್ರಮದ ಫಲ. ಮಣ್ಣು, ಮರುಮುಟ್ಟುಗಳು, ನಂತರ ಕಲ್ಲುಗಳನ್ನು ಉಪಯೋಗಿಸಿ ದೇವಾಲಯಗಳನ್ನು ಕಟ್ಟಲಾಯಿತು. ಕಲ್ಲುಗಳ ಬಳಕೆಯಿಂದ ಕಟ್ಟಲಾದ ಹಲವು ದೇವಾಲಯಗಳು ಇಂದಿಗೂ ಸುಸ್ಥಿತಿಯಲ್ಲಿದ್ದರೆ, ಅನೇಕ ಅವಶೇಷಗಳು ಮಾತ್ರ ಇಂದು ಉಳಿದಿವೆ.

ಚಿತ್ರದುರ್ಗ ಜಿಲ್ಲೆಯು, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದ ತವರುಮನೆಯಂತಿದೆ. ಬೆಟ್ಟ– ಗುಡ್ಡಗಳ ಸಾಲುಗಳನ್ನು ಹೊಂದಿದ್ದು, ಕರ್ನಾಟಕ ಭೂಭಾಗದ ಮಧ್ಯರಂಗದಲ್ಲಿರುವ ಈ ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಕ್ರಿಸ್ತಶಕ 18ನೇ ಶತಮಾನದವರೆಗೆ ತನ್ನದೇ ಆದ ಸಾಂಸ್ಕೃತಿಕ ಹಿನ್ನಲೆಯನ್ನು ಹೊಂದಿರುವುದು ಕಂಡು ಬರುತ್ತದೆ. ಈ ಪ್ರದೇಶವನ್ನಾಳಿದ ಮೌರ್ಯರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಪಾಳೆಯಗಾರರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಗುಡಿಹಳ್ಳಿ ಮೈಲಾರಲಿಂಗೇಶ್ವರ ದೇವಾಲಯವನ್ನು ಕುರಿತು ಚರ್ಚಿಸಲಾಗಿದೆ.

ಹಿರಿಯೂರು ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ 16 ಕಿ.ಮೀ ದೂರದಲ್ಲಿರುವ ಕಂದಾಯ ಗ್ರಾಮ. ಪುರಾತನ ದೇವಾಸ್ಥಾನ(ಗುಡಿ) ಇರುವ ಪ್ರದೇಶದಲ್ಲಿ ಜನವಸತಿ ಇದ್ದುದರಿಂದ ಅದನ್ನು ಗುಡಿಹಳ್ಳಿ ಎಂಬುದಾಗಿ ಕರೆಯಲಾಗಿದೆ.[1] ಇದರಿಂದ ಗುಡಿಹಳ್ಳಿ ಗ್ರಾಮದಲ್ಲಿ ವಿಜಯನಗರ ಕಾಲದ ದೇವಾಲಯ ಇದ್ದು ಅದರ ವಾಸ್ತು ಲಕ್ಷಣಗಳು ವಿಜಯನಗರ ಕಾಲವನ್ನೇ ಸೂಚಿಸುತ್ತವೆ. ಈ ಹಿನ್ನೆಲೆಯಲ್ಲಿ ಗುಡಿಹಳ್ಳಿ ಗ್ರಾಮದ ವಿಜಯನಗರ ಕಾಲದ ಮೈಲಾರಲಿಂಗೇಶ್ವರ ದೇವಾಲಯದ ವಾಸ್ತು ಮತ್ತು ಮೂರ್ತಿಶಿಲ್ಪದ ಲಕ್ಷಣಗಳನ್ನು ಕುರಿತು ತಿಳಿಯಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

**ದೇವಾಲಯದ ವೈಶಿಷ್ಟ್ಯತೆ**

- ಅಪಾಯದಂಚಿನಲ್ಲಿರುವ ಈ ದೇವಾಲಯದ ವಾಸ್ತು ವೈಶಿಷ್ಟ್ಯತೆ ಮತ್ತು ಅಲ್ಲಿರುವ ಶಿಲ್ಪಗಳನ್ನು ವ್ಯವಸ್ಥಿತವಾಗಿ ಗುರುತಿಸುವುದು.
- ಈ ದೇವಾಲಯದ ರಕ್ಷಣೆಗಾಗಿ ವಿಶೇಷವಾಗಿ ನಿರ್ಮಿಸಿರುವ ರಕ್ಷಣಾ ಮತ್ತು ಆವರಣ ಗೋಡೆ (Encloser Wall Embankment Wall)ಯ ವಿಶೇಷತೆಯನ್ನು ದಾಖಲಿಸುವುದು.
- ದೇವಾಲಯಕ್ಕೆ ಸಂಬಂಧಿಸಿದ ಸ್ಥಳೀಯ ಐತಿಹ್ಯಗಳನ್ನು ಗುರುತಿಸುವುದು.

ವಿಜಯನಗರ ಸಂಗಮ ದೊರೆಗಳ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯ ಆರಂಭಿಕ ವಿಜಯನಗರ ಶೈಲಿಯಲ್ಲಿದ್ದು, ಕಲೆ ಮತ್ತು ವಾಸ್ತು ಶಿಲ್ಪದ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದೆ.

**ದೇವಾಲಯದ ವಾಸ್ತು ವೈಶಿಷ್ಟ್ಯತೆ** :

ದೇವಾಲಯದ ವಿವಿಧ ವಾಸ್ತು ಭಾಗಗಳು ಮತ್ತು ಅವುಗಳ ವೈಶಿಷ್ಟ್ಯತೆಯನ್ನು ವ್ಯವಸ್ಥಿತವಾಗಿ ಅರಿಯಲು ದೇವಾಲಯದ ಒಳಭಾಗದ ಅಲಂಕಾರ ಮತ್ತು ದೇವಾಲಯದ ಹೊರ ಭಾಗದ ಅಲಂಕಾರಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಿಸಿದ ವಿವರಗಳು ಈ ಮುಂದಿವೆ.

**ದೇವಾಲಯದ ಒಳಭಾಗದ ಅಲಂಕಾರ** :

ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟವನ್ನು ಹೊಂದಿದೆ. ಗರ್ಭಗೃಹದಲ್ಲಿ ಎತ್ತರವಾದ ಪೀಠದ ಮೇಲೆ ಸುಖಾಸನದಲ್ಲಿರುವ ಮೈಲಾರಲಿಂಗೇಶ್ವರನ ಮತ್ತು ಗಂಗಮಾಳಮ್ಮ ಮೂರ್ತಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಗರ್ಭಗೃಹದ ಬಾಗಿಲುವಾಡವು ಏಕಶಾಖೆಯಲ್ಲಿ ಹೂಬಳ್ಳಿಯನ್ನು ಹೊಂದಿದೆ. ಸಭಾಮಂಟಪಕ್ಕೆ ಹೊಂದಿಕೊಂಡಂತೆ ಬಾಗಿಲುವಾಡದಲ್ಲಿ ಅಳವಾಗಿ ಕಡೆಯಲಾದ ಶೈವ ದ್ವಾರಪಾಲಕರಿದ್ದು ಅವರು ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಮತ್ತು ಗದೆಯನ್ನು ಹಿಡಿದು ನಿಂತಿರುವರು ಅಂತರಾಳದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಣೇಶನ ಉಬ್ಬುಗೆತ್ತನೆ ಇದೆ. ಹಾಗೆಯೇ ಶೈವ ದ್ವಾರಪಾಲಕರ ಪಕ್ಕದಲ್ಲಿ ಬಲ ಮತ್ತು ಎಡಭಾಗದಲ್ಲಿ ನಾಗಶಿಲ್ಪಗಳನ್ನು ಕಡೆಯಲಾಗಿದೆ. ಮತ್ತು ದೇವಾಲಯದ ಸಭಾಮಂಟಪದಲ್ಲಿ ಎಂಟು ಕಂಬಗಳಿದ್ದು ಚಚ್ಚೌಕಾಕಾರದಲ್ಲಿ ಕಡೆಯಲಾಗಿದೆ. ಈ

ಕಂಬಗಳು ಪೀಠ, ಪಾದ, ದಿಂಡು, ಹದಿನಾರು ಮುಖದ ಪಟ್ಟಿಕೆಯಲ್ಲಿದೆ ಕಂಬದ ಕೊನೆಯ ಭಾಗದಲ್ಲಿ ಸಾಧಾರಣವಾದ ಬೋದಿಗೆ ಇದೆ.

**ದೇವಾಲಯದ ಹೊರಭಾಗದ ಅಲಂಕಾರ** :

ಈ ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನ(ಅದರಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ) ಇದೆ. ದೇವಾಲಯದ ಭಿತ್ತಿಯು ನಿರಾಲಂಕೃತ ಮತ್ತು ಕಪೋತಯುಕ್ತ ನಾಸಿ ಇರುವುದು ಪ್ರಸ್ತರದ ಭಾಗಗಳವೆ. ಇಟ್ಟಿಗೆ–ಗಾರೆಯಿಂದ ಈ ಭಾಗವನ್ನು ಕಟ್ಟಿದ್ದು ಇದೂಂದು ದ್ವಿತಲ ದೇವಾಲಯವಾಗಿದೆ. ಇವುಗಳ ಹಿನ್ನೆಲೆಯಲ್ಲಿ ಈ ದೇವಾಲಯವನ್ನು ವಿಜಯನಗರ ಕಾಲದ ದೇವಾಲಯ ಎಂದು ಗುರುತಿಸಲಾಗಿದೆ.

**ಮೈಲಾರಲಿಂಗಪ್ಪ ಮತ್ತು ಗಂಗಮಾಳಮ್ಮ ಮೂರ್ತಿಶಿಲ್ಪ** :


ಮೈಲಾರಲಿಂಗಪ್ಪ ದೇವಾಲಯದಲ್ಲಿ ಹಲವು ಮೂರ್ತಿಶಿಲ್ಪಗಳಿದ್ದು ಇವುಗಳನ್ನು ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. ಗರ್ಭಗೃಹದ ಎತ್ತರದ ಪೀಠದ ಮೇಲೆ ಮೈಲಾರಲಿಂಗಪ್ಪನ ಮೂರು ಅಡಿ ಎತ್ತರದ ಮೂರ್ತಿಶಿಲ್ಪ ಇದೆ. ಮತ್ತು ಮೂರ್ತಿಶಿಲ್ಪದ ಹಿಂಬದಿಯಲ್ಲಿ ಪ್ರಭಾವಳಿ ಇದ್ದು ಸುಖಾಸನದಲ್ಲಿ ಕುಳಿತಿರುವ ಮೈಲಾರಲಿಂಗಪ್ಪನು ಚತುರ್ಭುಧಾರಿಯಾಗಿದ್ದು  ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ, ಮತ್ತು ಪಾನಬಟ್ಟಲವನ್ನು ಹಿಡಿದಿದ್ದಾನೆ. ಸುಖಾಸನದಲ್ಲಿರುವ ಮೈಲಾರಲಿಂಗಪ್ಪನ ಕೊರಳಲ್ಲಿ ಹಾರ, ಕಂಠಹಾರ, ಕಾಲ್ಕಡಗ, ಕೈಗಡಗ, ನಾಗಕುಂಡಲ, ಮೊದಲಾದ ಆಭರಣಗಳಿಂದ ಅಲಂಕರಿಸಲಾಗಿದೆ. ಮೈಲಾರಲಿಂಗಪ್ಪನ ಎಡಭಾಗದಲ್ಲಿ ಗಂಗಮಾಳಮ್ಮನ ಮೂರ್ತಿಶಿಲ್ಪ ಇದೆ. ಈ ಶಿಲ್ಪವು ಕೂಡ ಸುಖಾಸನದಲ್ಲಿದ್ದು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಪಾನಬಟ್ಟಲವನ್ನು ಹಿಡಿದು ವಿವಿಧ ಆಭರಣಗಳಿಂದ ಅಲಂಕೃತಳಾಗಿದ್ದಾಳೆ.

ಒಟ್ಟಾರೆಯಾಗಿ ಈ ಮೈಲಾರಲಿಂಗಪ್ಪನ ದೇವಾಲಯವು ಗುಡಿಹಳ್ಳಿಯಲ್ಲಿರುವ ಶೈವ ದೇವಾಲಯಗಳಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಹಾಗೂ ಭಿನ್ನತೆಯನ್ನು ಒಳಗೊಂಡಿದೆ. ದೇವಾಲಯದ ಸಂರಕ್ಷಣಾ ಕಾರ್ಯಗಳು ಅದಷ್ಟು ಶೀಘ್ರವಾಗಿ ಪೂರ್ಣಗೊಂಡು ಚಾರಿತ್ರಿಕ ಆಕರವಾದ ಈ ದೇವಾಲಯವನ್ನು ಮುಂದಿನ ಪೀಳಿಗೆಗೆ ತುರ್ತಾಗಿ ಉಳಿಸಿಕೊಡಬೇಕಾದ ಅವಶ್ಯಕತೆ ಇದೆ.

*Indian Journal of History and Archaeology*
***ISSN (E):2582-225X,*** **VOL-2, ISSUE -5,JANUARY-FEBRUARY, 2021, 52-56**

**ಛಾಯಾ ಚಿತ್ರಗಳು**





**ಮೈಲಾರಲಿಂಗೇಶ್ವರ ದೇವಾಲಯ**

**ಪರಾಮರ್ಶನ ಗ್ರಂಥಗಳು**

1. ನಾಯಕ್ ಡಿ.ಬಿ.,(ಸಂ), 2017, ಕರ್ನಾಟಕ ಗ್ರಾಮ ಚರಿತ್ರೆ ಕೋಶ ಚಿತ್ರದುರ್ಗ ಜಿಲ್ಲೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು, ಪು.491.
2. ಕ್ಷೇತ್ರಕಾರ್ಯದ ಮಾಹಿತಿ.